**ತರ್ಕವನ್ನು ಹೂಡುವುದು ಎಂದು ಅನಿಸುತ್ತದೆ...**

ಅದು ನಿಜ. ಪ್ರತಿನಾಯಕರೂ ಮೌಲ್ಯಶಿಕ್ಷಣವನ್ನು ಹೇಳುವವರೇ ಆಗಿರುತ್ತಾರೆ. ಈ ಬಗ್ಗೆ ಹೇಳುವಾಗ ನನಗೆ ವಿರೋಧ ಭಕ್ತಿ ಮಾರ್ಗದ ನೆನಪಾಗುತ್ತದೆ. ಯಕ್ಷಗಾನದ ಅನೇಕ ಕಡೆಗಳಲ್ಲಿ ವಿರೋಧ ಭಕ್ತಿ ಮಾರ್ಗದ ಪದ್ಯಗಳು ಸ್ವಾರಸ್ಯವಾಗಿವೆ. ಕೌರವನು ಕೃಷ್ಣನ ವಿರೋಧಿಯಾಗಿ ಬಂದು ಯುದ್ಧವೊಂದು ಏರ್ಪಡುವಂತೆ ಮಾಡಿ ಕೃಷ್ಣನಿಗೆ ಸಹಾಯ ಮಾಡುತ್ತಾನೆ ಎಂಬುದು ಈ ಭಕ್ತಿವರ್ಗದವರ ತರ್ಕ. ಇದಕ್ಕೆ ಪೂರಕವಾಗಿ ಯಕ್ಷಗಾನದ ಪದ್ಯಗಳೂ ಇವೆ. ಹೀಗೆ ಒಮ್ಮೆ ಕೌರವ ಪರವಾದ ವಾದವನ್ನು ಎದುರಿಸುವ ಕೃಷ್ಣ ಪಾತ್ರಧಾರಿ ಓರ್ವ ಸಾಂಪ್ರದಾಯಿಕ ಭಕ್ತ. 'ಇದು ಹೀಗಾಗುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ವಿರೋಧವು ಭಕ್ತಿಯಾದರೆ, ಕಂಸ, ರಾವಣ, ದುರ್ಯೋಧನರು ಭಕ್ತರಾದರೆ, ದುಷ್ಟ ಶಿಷ್ಟ ಎಂಬುದಕ್ಕೆ ಭೇದವೆಲ್ಲಿಂದ ಬಂತು ? ಈ ವಾದವು ದುಷ್ಟತನವು ರಾರಾಜಿಸಲು ಮಾರ್ಗ ಹಾಕಿಕೊಟ್ಟಂತಾಗುತ್ತದೆ' ಎಂದು ವಾದಿಸಿದರು. ಅದಕ್ಕೆ ಕೌರವ ಪಾತ್ರಧಾರಿಯಾಗಿ ಮಾತನಾಡುತ್ತಿದ್ದ ದಿ.ಅಡ್ವಕೇಟ್ ಬಾಲಕೃಷ್ಣ ರಾಯರು, 'ಹೌದು ಸ್ವಾಮೀ, ನೀನು ಹೇಳುತ್ತಿ. ನಿನಗೆ ವಿರೋಧ ಭಕ್ತಿ ಒಪ್ಪಿಗೆಯಿಲ್ಲ ಎಂದು. ಆದರೆ ಇಲ್ಲಿ ಹೇಳುವ ಪದ್ಯಗಳು ಹೀಗೆಲ್ಲ ಹೇಳುತ್ತವಲ್ಲಾ... ' ಕುಟುಕುತ್ತಾರೆ.

ಇದೇ ಪ್ರಸಂಗದಲ್ಲಿ ಒಮ್ಮೆ ಕಾರ್ಕಳದ ಭುಜಬಲಿ ಅಧಿಕಾರಿ ಎಂಬವರು ಕರ್ಮಸಿದ್ಧಾಂತವೇ ಪ್ರಧಾನ, ಭಗವಂತನ ಅಗತ್ಯವಿಲ್ಲ ಎನ್ನುವ ವಾದದಲ್ಲಿ ಜೈನ ಸಿದ್ಧಾಂತದ ತಿರುಳನ್ನೇ ಮಂಡಿಸಿದ್ದುಂಟು. ನಾನು ಕೃಷ್ಣನಾಗಿ ಪಾತ್ರ ನಿರ್ವಹಿಸಿದ್ದಾಗ ನನಗೆ ಆ ಮಂಡನೆ ಕೇಳಿ ಸ್ವಲ್ಪ ಇರಿಸುಮುರುಸಾಯಿತು. ಅವರ ವಾದ ಚಂದವಾಗಿದ್ದರೂ, ಕೃಷ್ಣ ಅದನ್ನು ಒಪ್ಪುವುದು ಸಾಧ್ಯವಿಲ್ಲವಲ್ಲ. ಅದನ್ನು ನಾನು ವಿಫಲ ಪಡಿಸಲೇಬೇಕಿತ್ತು. ನಾನು, ಕರ್ಮ ಸಿದ್ಧಾಂತದ ಸೀಮಿತತೆಯನ್ನು ವಿವರಿಸುತ್ತ ಸಾಗಿದೆ. ಕೊನೆಗೆ ನನ್ನ ಮಾತನ್ನು ಅವರು ಒಪ್ಪಿ, 'ಹೌದೋ.. ನೀನು ಹಾಗನ್ನುತ್ತೀಯಾದರೆ ಸರಿ...' ಎಂದು ಪೂರ್ಣವಿರಾಮ ಹಾಕಿದರು. ನಿಜವಾಗಿಯೂ ವೇದಾಂತ, ದರ್ಶನ ಮುಂತಾದ ಓದಿನ ಪಾಂಡಿತ್ಯವಿದ್ದವರು ಇಂತಹ ಪ್ರಸಂಗಗಳಲ್ಲಿ, ಕಥಾ ಸಂದರ್ಭಕ್ಕೆ ಬದ್ಧರಾಗಿರುತ್ತಾರೆ. ತಾಳಮದ್ದಳೆಯಲ್ಲಿ 'ಅಹಂ'ಗೆ ಜಾಗವಿರುವುದಿಲ್ಲ.

◆ **ನಿಮಗೆ ಏನು ಅನಿಸುತ್ತದೆ... ಕರ್ಮ ಸಿದ್ಧಾಂತ ಸರಿಯೆಂದೋ ಅಥವಾ ಭಗವಂತನಿಗೆ ಶರಣಾಗುವುದು ಸರಿಯೆಂದೋ ?**

ಪ್ರಾರಬ್ಧ ಮುಖ್ಯವೋ, ಬುದ್ಧಿದೋಷ ಮುಖ್ಯವೋ ಎಂಬೊಂದು ಜಿಜ್ಞಾಸೆಯಿದೆ. ಭಗವಂತನು ಕರ್ಮವನ್ನು ಖಂಡಿಸಿ ಪಾರು ಮಾಡುತ್ತಾನೆ ಎಂದಾದರೆ ತಪ್ಪಾಗುತ್ತದೆಯಲ್ಲ? ಇದು ಭಾರೀ ಜುಡುಕಿನ ವಾದಸರಣಿ. ಅಂತಿಮವಾಗಿ ಕರ್ಮವೇ ದೇವರೆಂದು ಬಗೆದು ಕಾರ್ಯನಿರತನಾಗುವುದನ್ನು ಸರಿಯೆಂದು ಒಪ್ಪಬಹುದು. ಆದರೆ ಯಾವುದೇ ಕರ್ಮವನ್ನು ಚಾಲನೆ ಮಾಡಲು ಶಕ್ತಿಯೊಂದರ ಅಗತ್ಯವಿದೆ. ಅದುವೇ ಭಗವಂತ ಎಂದು ಕರೆಯಬಹುದು. ವೈಶೇಷಿಕ, ನ್ಯಾಯಶಾಸ್ತ್ರದಲ್ಲಿ ಈ ವ್ಯಾಖ್ಯಾನಗಳು ವಿಸ್ತೃತವಾಗಿದೆ. ಒಬ್ಬೊಬ್ಬರ ಜೀವನದೃಷ್ಟಿ ಒಂದೊಂದು ತೆರನಾಗಿರುತ್ತದೆ. ಅದಕ್ಕೆ ತಕ್ಕಂತೆ ನಿಲುವುಗಳು ರೂಪುಗೊಳ್ಳುತ್ತವೆ. ಇದೇ ಸರಿ ಎಂದರೆ ಇದಲ್ಲ.

◆ **ದೇಶದ ವಿವಿಧೆಡೆಗಳಲ್ಲಿ ಇರುವ ಇತರ ಕಲಾಪ್ರಕಾರಗಳನ್ನೂ ಒಳಗೊಂಡಂತೆ ನೀವು ಅವುಗಳ ಸೊಗಸಿಗೆ ಮಾರುಹೋಗಿರುವುದಾಗಿ ಅನೇಕ ಬಾರಿ ಹೇಳಿದ್ದೀರಿ.**

ನಿಜ. ನಾವು ಓದುವ ತತ್ತ್ವಶಾಸ್ತ್ರದ ತಿರುಳು ಕೇವಲ ಭಾರತಕ್ಕೆ ಸೀಮಿತವಾದುದು ಎಂದರೆ ತಪ್ಪಾಗುತ್ತದೆ. ಈ ತಿರುಳು ಭಾರತಾದ್ಯಂತ ಗೋಚರಿಸುತ್ತದೆ ಹೌದು. ಆದರೆ ದರ್ಶನದ ವಿವಿಧ ಮುಖಗಳು ಪರಿಪಾಠಗೊಂಡು ಜನರ ಬಳಿಗೆ ಕೊಂಡೊಯ್ಯುವ ಕೆಲಸವನ್ನು, ಅಂದರೆ ತತ್ತ್ವಶಾಸ್ತ್ರದ ಪ್ರಜಾತಂತ್ರೀಕರಣದ ಕೆಲಸವನ್ನು ಭಾರತ ದೇಶದ ಎಲ್ಲ ಕಲೆಗಳು ಮಾಡುತ್ತವೆ. ಲಡಾಖ್‌ನ ಬೌದ್ಧ ನಾಟ್ಯ, ಅಸ್ಸಾಂನ ಭಾವನಾ, ಒರಿಸ್ಸಾದ ಪ್ರಹ್ಲಾದ ನಾಟ, ಆಂಧ್ರದ ಯಕ್ಷಗಾನ, ತಮಿಳುನಾಡಿನ ತಿರುಕೂತ್ತು, ಮಹಾರಾಷ್ಟ್ರದ ದಶಾವತಾರಿ, ಕರ್ನಾಟಕದ ಹಲವು ತೆರನಾದ ಬಯಲಾಟ- ಎಲ್ಲವೂ ಎರಡು ಮಹಾಕಾವ್ಯಗಳನ್ನು ಆಧರಿಸಿಕೊಂಡು ಬದುಕಿನ ನಶ್ವರತೆಯನ್ನು ಹೇಳುವ, ಮೌಲ್ಯಶಿಕ್ಷಣವನ್ನು ಪ್ರತಿಪಾದಿಸುವ ಕೆಲಸ ಮಾಡುತ್ತಲೇ ಇವೆ. ಇಷ್ಟು ಮಾತ್ರವಲ್ಲ, ಮಲೇಷ್ಯಾದ ಬೊಂಬೆಯಾಟ, ಬಾಲಿ,